ಅ) ರಾಜ್ಯದ ಹೊರಗಿನ ಆಯುರ್ವೇದಿಯ ಔಷಧಿಗಳ ಉತ್ಪಾದನೆಯ ಘಟಕಗಳಿಗೆ ಬೇಕಾಗುವ ಅಥವಾ ರಾಜ್ಯದಿಂದ ಸಂಗ್ರಹಿಸುವ ಗಿಡ ಮೂಲಿಕೆಗಳ ವಿವರ ಇದೆಯೇ;

ಇ) ರಾಜ್ಯದ ಆದಾಯ ಹೆಚ್ಚಿಸಲು ಮತ್ತು ಭೂಸಂಪತ್ತಿನ ಪ್ರಯೋಜನ ಪಡೆಯಲು ಖಾಸಗೀ ಕಂಪನಿಗಳಿಗೆ ಕಂದಾಯ / ಅರಣ್ಯ ಭೂಮಿಗಳನ್ನು ನೀಡಲಾಗುವುದೇ?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ರಾಜ್ಯದಲ್ಲಿರುವ ಆಯುರ್ವೇದಿಯ ಔಷಧಿ ಕಂಪನಿಗಳು ಅರಣ್ಯ ಇಲಾಖೆ ವ್ಯಾಪ್ತಿಗೆ ಬರುವುದಿಲ್ಲ. ಆದುದರಿಂದ ಅವರಿಗೆ ಬೇಕಾಗುವ ಗಿಡ ಮೂಲಿಕೆಗಳನ್ನು ಅವರೇ ಬೆಳೆಸುತ್ತಿರುವ ಬಗ್ಗೆ ಅರಣ್ಯ ಇಲಾಖೆಗೆ ಮಾಹಿತಿಯಿರುವುದಿಲ್ಲ.

ಆ) ರಾಜ್ಯದ ಹೊರಗಿನ ಆಯುರ್ವೇದಿಯ ಔಷಧಿಗಳ ಉತ್ಪಾದನೆಯ ಘಟಕಗಳು ಅರಣ್ಯ ಇಲಾಖೆ ವ್ಯಾಪ್ತಿಗೆ ಬರುವುದಿಲ್ಲ. ಆದುದರಿಂದ, ಅವರು ರಾಜ್ಯದಿಂದ ಸಂಗ್ರಹಿಸುವ ಗಿಡಮೂಲಿಕೆಗಳ ವಿವರ ಲಭ್ಯವಿರುವುದಿಲ್ಲ.

ಇ) ಇಂತಹ ಯಾವುದೇ ಯೋಜನೆ ಅರಣ್ಯ ಇಲಾಖೆಯಲ್ಲಿ ಜಾರಿಯಲ್ಲಿರುವುದಿಲ್ಲ.

ರಾಜ್ಯದಲ್ಲಿ ಔಷಧಿ ಗಿಡಮೂಲಿಕೆಗಳ ಅಭಿವೃದ್ಧಿ

2205 (2500) ಶ್ರೀ ಬಿಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಅರಣ್ಯದಲ್ಲಿ ಸಿಗುವ ಮಹತ್ವದ ಔಷಧೀಯ ಗಿಡ ಮೂಲಿಕೆಗಳು ಯಾವುವು; ಹಾಗೂ ಯಾವ ಪ್ರದೇಶದಲ್ಲಿ ಬೆಳೆದಿವೆ; (ವಿವರ ನೀಡುವುದು)

ಆ) ಗಿಡಮೂಲಿಕೆಗಳ ವನಗಳು ಯಾವ ಯಾವ ಸ್ಥಳದಲ್ಲಿ ಬೆಳೆಸಿದೆ; ಅವುಗಳಿಂದ ಆಗಿರುವ ಪ್ರಯೋಜನ ಏನು; ವನಗಳ ಅಭಿವೃದ್ಧಿಯ ಉದ್ದೇಶವೇನಾದರೂ ಇದೆಯೇ;

ಇ) ರಾಜ್ಯದ ಗಿಡಮೂಲಿಕೆಗಳಿಗೆ ಬಹಳ ಬೇಡಿಕೆ ಇರುವುದರಿಂದ ಇದರ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮ ಏನು? (ವಿವರ ನೀಡುವುದು)?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ರಾಜ್ಯ ಅರಣ್ಯದಲ್ಲಿ ಸಿಗುವ ಮಹತ್ವದ ಔಷಧೀಯ ಗಿಡಮೂಲಿಕೆಗಳೆಂದರೆ ಮಧುನಾಶಿನಿ, ನೆಲ್ಲಿ, ಅಶ್ವಗಂಧ, ಲೋಳೆಸರ, ಇಪ್ಪಲಿ, ನೆಲಬೇವು, ನೆಲನೆಲ್ಲಿ, ಶತಾವರಿ, ಬಜೆ, ಆಡುಸೋಗೆ, ಸದಾಪುಷ್ಪ, ಪಚೋಲಿ, ಲೆಮನ್ ಗ್ರಾಸ್, ದೊಡ್ಡಪತ್ರೆ, ಅಮೃತ ಬಳ್ಳಿ, ಮಾಕಳಿ, ಒಂದೆಲಗ (ಬ್ರಾಹ್ಮಿ) ಬನ್ನಿ, ಪಾರಿಜಾತ, ಗೋರಂಟಿ, ಕಾಡು ಬದನೆ, ಅಮಟೆ, ಅತ್ತಿ, ತುಂಬೆ, ತುಳಸಿ, ಆಲ, ಅಳಲೆ, ಆಡುಸೋಗೆ, ಉತ್ತರಾಣಿ, ಎಕ್ಕ, ಗುಲಗಂಜಿ, ಚಿತ್ರಮೂಲ, ದಾಸವಾಳ, ದರ್ಬೆ, ನಾಗಸಂಪಿಗೆ, ದಾಲ್ಚಿನ್ನಿ, ನೇರಳೆ, ಪಗಡೆ, ಬಸರಿ, ಬಾಗೆ, ಮದುನಾಶಿನಿ, ಶಿವನೆ, ಶ್ರೀಗಂಧ, ಸರ್ಪಗಂಧ, ಬಿಲ್ವಪತ್ರೆ, ಮದರಂಗಿ, ಬೇವು ಇತ್ಯಾದಿ.

ಹೆಚ್ಚಿನ ಔಷಧಿಯ ಸಸ್ಯಗಳು ಪಶ್ಚಿಮ ಘಟ್ಟ ಅರಣ್ಯ ಪ್ರದೇಶದಲ್ಲಿ ಕಂಡುಬರುತ್ತದೆ. ಉಳಿದಂತೆ ಅನೇಕ ಜಾತಿಯ ಔಷಧೀಯ ಸಸ್ಯಗಳು ರಾಜ್ಯದ ಪೂರ್ವ ಭಾಗದ ಅರಣ್ಯಗಳಲ್ಲೂ ಸಹಾ ಕಂಡು ಬರುತ್ತವೆ.

ಆ) ಅರಣ್ಯ ಇಲಾಖೆಯಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಗಿಡಮೂಲಿಕೆಗಳ ವನಗಳನ್ನು ಬೆಳೆಸಲಾಗಿದೆ:-

ಬೆಂಗಳೂರು, ಚಿತ್ರದುರ್ಗ, ಧಾರವಾಡ, ಮಂಗಳೂರು, ಶಿವಮೊಗ್ಗ, ತುಮಕೂರು, ಬಳ್ಳಾರಿ, ದಾವಣಗೆರೆ, ಮೈಸೂರು, ಮಂಡ್ಯ, ಮಡಿಕೇರಿ, ಬೀದರ್, ರಾಯಚೂರು, ಚಿಕ್ಕಮಗಳೂರು, ಉತ್ತರಕನ್ನಡ, ಬೆಂಗಳೂರು ಗ್ರಾಮಾಂತರ, ಕೋಲಾರ.

ಈ ವನಗಳ ಉದ್ದೇಶ ಹಾಗೂ ಇವುಗಳಿಂದ ಆಗುವ ಪ್ರಯೋಜನಗಳು ಈ ಕೆಳಕಂಡಂತಿವೆ:-

1. ಔಷಧೀ ಸಸ್ಯಗಳ ಬಗ್ಗೆ ಹಾಗೂ ಅವುಗಳ ಸಂರಕ್ಷಣೆಯ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡುವುದು.
2. ಪ್ರಮುಖವಾದ ಔಷಧಿ ಗಿಡಗಳ ಬೀಜಗಳು, ಬೇರುಗಳು, ಎಲೆ, ಹಾಂಡ ಇತ್ಯಾದಿಗಳು ಔಷಧಿಗೆ ಬರುವುದರಿಂದ ಅಂತಹ ಸಸಿಗಳನ್ನು ಸಾರ್ವಜನಿಕರಿಗೆ ವಿತರಣೆ ಮಾಡುವುದು ಹಾಗೂ ಅವುಗಳ ಬಗ್ಗೆ ಮಾಹಿತಿ ನೀಡುವುದು.
3. ಆಯುರ್ವೇದ ಸಂಶೋಧನೆಗೆ ಲಭ್ಯವಿರುವ ಮಾಹಿತಿಯನ್ನು ನೀಡುವುದು.
4. ನಶಿಸಿ ಹೋಗುತ್ತಿರುವ ಔಷಧೀಯ ಸಸ್ಯಗಳನ್ನು ಪತ್ತೆಹಚ್ಚಿ ಅವುಗಳನ್ನು ಉಳಿಸಿ ಅಭಿವೃದ್ಧಿಗೊಳಿಸುವುದು.
5. ಆಯುರ್ವೇದಕ್ಕೆ ಸಂಬಂಧಿಸಿದ ವಿದ್ಯಾರ್ಥಿಗಳಿಗೆ ಪ್ರಾತ್ಯಕ್ಷಿಯಾಗುತ್ತದೆ.

ಇ) ಯಾವ ಯಾವ ಔಷಧಿ ಗಿಡಗಳ ಬೇಡಿಕೆಯು ಎಷ್ಟು ಪ್ರಮಾಣದಲ್ಲಿ ಎಂಬ ಬಗ್ಗೆ ನಿಕರವಾಗಿ ಮಾಹಿತಿಯಿರುವುದಿಲ್ಲ. ಆದರೂ ಸಹಾ ಗಿಡಮೂಲಿಕೆಗಳ ರಕ್ಷಣೆಗಳಿಗೆ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಔಷಧೀಯ ಸಸ್ಯಗಳು ಹಾಗೂ ಗಿಡಮೂಲಿಕೆಗಳನ್ನು ಪತ್ತೆ ಹಚ್ಚಿ ಅವುಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.
2. ಸಾರ್ವಜನಿಕರಿಗೆ ಈ ಸಸ್ಯಗಳ ಬಗ್ಗೆ ಮಾಹಿತಿ ನೀಡಿ, ಅವುಗಳ ಸಂರಕ್ಷಣೆಯ ಬಗೆಗೆ ತಿಳುವಳಿಕೆ ನೀಡಲಾಗುತ್ತಿದೆ.
3. ವಿನಾಶದ ಅಂಚಿನಲ್ಲಿರುವ ಗಿಡಮೂಲಿಕೆಗಳನ್ನು ಸಂರಕ್ಷಣೆ ಮಾಡುವುದು ಹಾಗೂ ಅವುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆದು ಆಯುರ್ವೇದ ಔಷಧಿ ಪದ್ಧತಿಯನ್ನು ಉತ್ತೇಜನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
4. ಔಷಧೀಯ ಸಸ್ಯಗಳನ್ನು ಪ್ರೋತ್ಸಾಹಿಸಿ ಬೆಳೆಸುವ ಸಲುವಾಗಿ ರಾಜ್ಯ ಸರ್ಕಾರವು ಔಷಧೀಯ ಸಸ್ಯ ಮಂಡಳಿ ಎಂಬ ಸ್ವಾಯತ್ತ ಸಮಿತಿಯನ್ನು ಸ್ಥಾಪಿಸಿರುತ್ತದೆ.

ಬಸವನ ಬಾಗೇವಾಡಿಯಲ್ಲಿ ಕೈಗೊಂಡ ರಸ್ತೆ ಕಾಮಗಾರಿಗಳು

2206 (2389) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಿ.ಆರ್.ಎಫ್. ಯೋಜನೆಯಡಿ ಈವರೆಗೂ ಬಿಜಾಪುರ ಜಿಲ್ಲೆಯಲ್ಲಿ ಮಂಜೂರಾಗಿರುವ ರಸ್ತೆಗಳು ಯಾವುವು; (ಮತ ಕ್ಷೇತ್ರವಾರು ಮಾಹಿತಿ ನೀಡುವುದು);

ಆ) ಬಸವನಬಾಗೇವಾಡಿ ಕ್ಷೇತ್ರದ ಮಸೂತಿ-ಕೂಡಿಗಿ ರಾಷ್ಟ್ರೀಯ ಹೆದ್ದಾರಿ-13 ರವರೆಗಿನ ರಸ್ತೆ, ಉಕ್ಕಲಿ-ಮಸಲಿಹಾಳ ರಸ್ತೆ, ಮಮದಾಪುರ ಕ್ರಾಸ್‌ನಿಂದ ರಾಷ್ಟ್ರೀಯ ಹೆದ್ದಾರಿ-218 ರವರೆಗಿನ ರಸ್ತೆಗಳನ್ನು ಸುಧಾರಿಸಲು ಕೇಂದ್ರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದೆಯೆ;